ಬಂಟ್ವಾಳ ಕಥೋಲಿಕ್
ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ರಿಜಿಸ್ಟರ್ ಸಂಖ್ಯೆ : **13754/97-98**

ರೋಯಲ್ ಕಾಂಪ್ಲೆಕ್ಸ್, 1ನೇ ಮಹಡಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು,
ಮುಖ್ಯ ರಸ್ತೆ, ಬಿ.ಸಿ.ರೋಡು, ಜೋಡು ಮಾರ್ಗ, ಬಂಟ್ವಾಳ ತಾಲೂಕು - 574 219

2025-26 ನೇ
ಸಾಲಿನ ವಾರ್ಷಿಕ ವರದಿ

ಮತ್ತು

29 ನೇ ವಾರ್ಷಿಕ ಮಹಾಸಭೆಯ
ಆಮಂತ್ರಣ

20-09-2026
ಆದಿತ್ಯವಾರ

ಪೂರ್ವಾಹ್ನ
ಗಂಟೆ **11:00**

ಸ್ಪರ್ಶಾ ಕಲಾಮಂದಿರ, ಬಿ.ಸಿ.ರೋಡು,
ಜೋಡುಮಾರ್ಗ, ಉದ್ಯಾನವನದ ಬಳಿ

Scan me!

08255-234026
bcccsociety@gmail.com
www.bcccsociety.com

ಆಡಳಿತ ಮಂಡಳಿ



ಶ್ರೀ ಜೀವನ್ ಲೊಯ್ಡ್ ಪಿಂಟೊ
ಅಧ್ಯಕ್ಷರು



ಶ್ರೀ ವಲೇರಿಯನ್ ಬರೆಟ್ಟೊ
ಉಪಾಧ್ಯಕ್ಷರು



ಶ್ರೀ ಅನಿಲ್ ಹೆರಾಲ್ಡ್ ಫ್ರಾಂಕ್
ನಿರ್ದೇಶಕರು




ಶ್ರೀ ಲಾದ್ರು ಮಿನೇಜಸ್
ನಿರ್ದೇಶಕರು



ಶ್ರೀ ರೊನಾಲ್ಡ್ ವಿಜಯ್ ಫೆರ್ನಾಂಡಿಸ್
ನಿರ್ದೇಶಕರು



ಶ್ರೀಮತಿ ಗ್ಲೋರಿಯಾ ಪ್ರೀಮಾ ಕುಟಿನ್ಹೊ
ನಿರ್ದೇಶಕರು



ಶ್ರೀ ವಿನ್ಸೆಂಟ್ ಕ್ಲೋಡಿ ಕಾರ್ಲೊ
ನಿರ್ದೇಶಕರು



ಶ್ರೀ ಲೊರೆನ್ಸ್ ಫ್ಲಫೋರ್ಡ್ ಡಿಸೋಜಾ
ನಿರ್ದೇಶಕರು



ಶ್ರೀ ಫ್ರಾನ್ಸಿಸ್ ಮೆಂಡೊನ್ಸ
ನಿರ್ದೇಶಕರು



ಶ್ರೀ ಹಿಲಾರಿ ಕ್ರಾಸ್ತಾ
ನಿರ್ದೇಶಕರು



ಶ್ರೀ ಹ್ಯೂಬರ್ಟ್ ಲೋಬೊ
ನಿರ್ದೇಶಕರು



ಶ್ರೀಮತಿ ಅನಿತಾ ನೊರೊನ್ಹಾ
ನಿರ್ದೇಶಕರು



ಶ್ರೀಮತಿ ಬೆನೆಡಿಕ್ಟಾ ಸಲ್ಡಾನ್ಹ
ನಿರ್ದೇಶಕರು



ಶ್ರೀ ವಿಶಾಲ್ ಡಿಸೋಜ
ನಿರ್ದೇಶಕರು



ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜ
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

ಅಧ್ಯಕ್ಷರ ನುಡಿಗಳು



ಆತ್ಮೀಯ ಸಹಕಾರಿ ಸದಸ್ಯರೇ,

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ(ನಿ.) 2025–26ನೇ ಸಾಲಿನ ಸಂಘದ 29ನೇ ವಾರ್ಷಿಕ ಮಹಾಸಭೆಗೆ, ಆಡಳಿತ ಮಂಡಳಿಯ ಪರವಾಗಿ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಆತ್ಮೀಯ ಸ್ವಾಗತ ಹಾಗೂ ಹೃತ್ಪೂರ್ವಕ ಆಹ್ವಾನ.

"ಸಹಕಾರ ನಮ್ಮ ಪರಂಪರೆ, ಒಗ್ಗಟ್ಟು ನಮ್ಮ ಶಕ್ತಿ," ಈ ಮೌಲ್ಯಗಳನ್ನು ಆದರ್ಶವಾಗಿಸಿಕೊಂಡು, ನಮ್ಮ ಸಂಘವು ಸುದೀರ್ಘ 29 ವರ್ಷಗಳ ವಿಶ್ವಾಸ, ಸಹಕಾರ ಮತ್ತು ಸೇವೆಯ ಸಾರ್ಥಕ ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಆತ್ಮೀಯವಾಗಿ ಬೆರೆತು, ವಿಶಿಷ್ಟ ಸಾಧನೆಗಳನ್ನು ದಾಖಲಿಸುತ್ತಾ, ಸಹಕಾರಿ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿ, ಜನರ ವಿಶ್ವಾಸ ಹಾಗೂ ಜನಪ್ರಿಯತೆಯನ್ನು ಗಳಿಸಿಕೊಂಡು ಸಂಘವು ಅಭಿವೃದ್ಧಿಯ ಹೊಸ ಹೆಜ್ಜೆಗಳನ್ನು ನಿರಂತರವಾಗಿ ಇಡುತ್ತಿದೆ. 29ನೇ ವಾರ್ಷಿಕ ಮಹಾಸಭೆಯ ಈ ಸಂದರ್ಭದಲ್ಲಿ, ಕಳೆದ ಸಾಲಿನಲ್ಲಿ ಸಂಘವು ಸಾಧಿಸಿದ ಪ್ರಗತಿ ಮತ್ತು ಯಶಸ್ಸನ್ನು ಸ್ಮರಿಸುವುದರೊಂದಿಗೆ, ಮುಂದಿನ ದಿನಗಳಲ್ಲಿ ಸಂಘವನ್ನು ಇನ್ನಷ್ಟು ಬಲಿಷ್ಠ, ಸದೃಢ ಹಾಗೂ ಅಭಿವೃದ್ಧಿಯತ್ತ ಕೊಂಡೊಯ್ಯುವ ನಮ್ಮ ಸಂಕಲ್ಪವನ್ನು ತಮ್ಮೆಲ್ಲರೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

2025–26ನೇ ಸಾಲಿನಲ್ಲಿ ನಮ್ಮ ಸಂಘವು ರೂ.1400 ಕೋಟಿಗೂ ಹೆಚ್ಚು ವಹಿವಾಟು ನಡೆಸಿ, ರೂ.3.40 ಕೋಟಿ ಲಾಭ ಗಳಿಸುವ ಮೂಲಕ ಗಮನಾರ್ಹ ಆರ್ಥಿಕ ಪ್ರಗತಿಯನ್ನು ಸಾಧಿಸಿದೆ. 2026ರ ಮಾರ್ಚ್ ಅಂತ್ಯಕ್ಕೆ ಸಂಘದ ಠೇವಣಿ ರೂ.149.85 ಕೋಟಿ, ಸಾಲ ರೂ.136.64 ಕೋಟಿ ಇದ್ದು, ಪ್ರಸ್ತುತ ಸಂಘದಲ್ಲಿ ರೂ.165 ಕೋಟಿ ಠೇವಣಿ, ರೂ.153 ಕೋಟಿ ಹೊರಬಾಕಿ ಸಾಲದೊಂದಿಗೆ ಅಭಿವೃದ್ಧಿಯತ್ತ ಸಂಘದ ವ್ಯವಹಾರವು ಮುನ್ನಡೆಯುತ್ತಿದೆ. ಈ ಸಂದರ್ಭದಲ್ಲಿ, ಸಂಘದ ದುಡಿಯುವ ಬಂಡವಾಳವು ರೂ. 180 ಕೋಟಿ ತಲುಪಿರುವುದನ್ನು ನಿಮಗೆ ತಿಳಿಸಲು ಹೆಮ್ಮೆಯಾಗುತ್ತದೆ.

ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸುವುದು, ಹೆಚ್ಚಿನ ಸದಸ್ಯರನ್ನು ಸಂಘದೊಂದಿಗೆ ಸೇರ್ಪಡೆಗೊಳಿಸುವುದು ಹಾಗೂ ವ್ಯವಹಾರದ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶದಿಂದ, ಸಂಘದ ಕಾರ್ಯವ್ಯಾಪ್ತಿಯಲ್ಲಿ ಶೀಘ್ರದಲ್ಲಿಯೇ ಮಂಗಳೂರಿನ ಬಜ್ಪೆ ಮತ್ತು ಪುತ್ತೂರಿನ ಪಡೀಲ್ ಎಂಬಲ್ಲಿ ಎರಡು ನೂತನ ಶಾಖೆಗಳು ಶುಭಾರಂಭಗೊಳ್ಳಲಿವೆ. ಈ ಮೂಲಕ ಸದಸ್ಯರಿಗೆ ಇನ್ನಷ್ಟು ಉತ್ತಮ ಹಾಗೂ ಸುಲಭವಾದ ಸೇವೆಗಳನ್ನು ಒದಗಿಸುವುದರ ಜೊತೆಗೆ, ಸಂಘದ ವ್ಯವಹಾರ ವಿಸ್ತರಣೆಗೆ ಮತ್ತಷ್ಟು ಅವಕಾಶಗಳು ಸೃಷ್ಟಿಯಾಗಲಿವೆ. ಅದೇ ರೀತಿ, ಸಂಘದ ಸ್ವಂತ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ನೂತನ ಕಟ್ಟಡವು ಲೋಕಾರ್ಪಣೆಗೊಳ್ಳಲಿದ್ದು, ಈ ನೂತನ ಭವ್ಯ ಕಟ್ಟಡಕ್ಕೆ ಸೂಕ್ತ ಹಾಗೂ ಅರ್ಥಪೂರ್ಣ ಹೆಸರನ್ನು ಸೂಚಿಸುವ ಅವಕಾಶವನ್ನು ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಕಲ್ಪಿಸಲಾಗಿದೆ. ಈ ನೂತನ ಕಟ್ಟಡವು ಸಂಘದ ಸೇವಾ ಸೌಲಭ್ಯಗಳನ್ನು ಮತ್ತಷ್ಟು ಬಲಪಡಿಸುವುದರೊಂದಿಗೆ, ಸಂಘದ ಅಭಿವೃದ್ಧಿಯ ಪಯಣದಲ್ಲಿ ಮತ್ತೊಂದು ಮಹತ್ವದ ಸಾದನೆಯಾಗಲಿದೆ.

ನಮ್ಮ ಈ ಸಂಘದ ಸಾಧನೆಗೆ ಮತ್ತು ಆರ್ಥಿಕ ವೃದ್ಧಿಗೆ ಬೆನ್ನೆಲುಬು ಆಗಿರುವ ಸದಸ್ಯರಿಗೆ, ಗ್ರಾಹಕ ಬಂಧುಗಳಿಗೆ, ಆಡಳಿತ ಮಂಡಳಿಗೆ, ಹಾಗೂ ಸಿಬ್ಬಂದಿ ವರ್ಗದ ಪ್ರಾಮಾಣಿಕ ಕರ್ತವ್ಯಕ್ಕೆ ಅಭಿನಂದಿಸುತ್ತಾ, ಮುಂದಕ್ಕೂ ನಿರಂತರ ಪ್ರಗತಿಯನ್ನು ಹೊಂದಲು, ಸಂಘವನ್ನು ಇನ್ನಷ್ಟೂ ಬಲಿಷ್ಠಗೊಳಿಸಲು ತಮ್ಮೆಲ್ಲರ ಸಹಕಾರ ಕೋರುತ್ತೇನೆ.

"ಸಂಘದ ಯಶಸ್ಸು ನಮ್ಮೆಲ್ಲರ ಯಶಸ್ಸು, ಸಂಘದ ಅಭಿವೃದ್ಧಿ ನಮ್ಮೆಲ್ಲರ ಜವಾಬ್ದಾರಿ." ನಿಮ್ಮೆಲ್ಲರ ಒಗ್ಗಟ್ಟಿನೊಂದಿಗೆ ಸಂಘವನ್ನು ಅಭಿವೃದ್ಧಿಯತ್ತ ಮುನ್ನಡೆಸೋಣ.

ಜೈ ಹಿಂದ್, ಜೈ ಸಹಕಾರ
ಶುಭಾಶಯಗಳೊಂದಿಗೆ

– ಇಂತೀ
ಜೀವನ್ ಲೋಯ್ಡ್ ಪಿಂಟೊ
ಅಧ್ಯಕ್ಷರು

ಶಾಖೆಗಳು

ಬಿ.ಸಿ.ರೋಡ್ ಶಾಖೆ

ರೋಯಲ್ ಕಾಂಪ್ಲೆಕ್ಸ್, 1 ನೇ ಮಹಡಿ,
ಯೂನಿಯನ್ ಬ್ಯಾಂಕ್ ಆಫ್
ಇಂಡಿಯಾ ಎದುರು,
ಮುಖ್ಯ ರಸ್ತೆ, ಬಿ.ಸಿ.ರೋಡ್,
ಬಂಟ್ವಾಳ ತಾಲೂಕು–574219,
Ph : 8904089534
Email : bcccsbcroad@gmail.com

ಫರಂಗಿಪೇಟೆ ಶಾಖೆ

ವಿಶ್ವಾಸ್ ಸಿಟಿ ಸೆಂಟರ್ ಬಿಲ್ಡಿಂಗ್,
ನೆಲ ಮಹಡಿ
ಪುದು ಗ್ರಾಮ, ಫರಂಗಿಪೇಟೆ
ಬಂಟ್ವಾಳ –574143
Ph : 8904089536
Email : bcccsfarangipete@gmail.com

ಬಂಟ್ವಾಳ ಶಾಖೆ

ರಾಜಸೌಧ,
1ನೇ ಮಹಡಿ
ಬಂಟ್ವಾಳ ಕಸ್ಬಾ ಗ್ರಾಮ
ಬಂಟ್ವಾಳ ಅಂಚೆ –574211
Ph : 8904089537
Email :bcccsbantwal@gmail.com

ವಾಮದಪದವು ಶಾಖೆ

ಲಕ್ಷ್ಮಿಗಣೇಶ್ ಬಿಲ್ಡಿಂಗ್,
1ನೇ ಮಹಡಿ ಚೆನ್ನೈತ್ತೋಡಿ ಗ್ರಾಮ
ವಾಮದಪದವು ಅಂಚೆ, ಬಂಟ್ವಾಳ
ತಾಲೂಕು – 574324
Ph : 8904089535
Email :bcccsvamadapadav@gmail.com

ಕುಪ್ಪೆಪದವು ಶಾಖೆ

ಸಮತಾ ಕಾಂಪ್ಲೆಕ್ಸ್,
1ನೇ ಮಹಡಿ
ಕುಪ್ಪೆಪದವು, ಮಂಗಳೂರು –574144
Ph : 8904089531
Email : bcccskuppepadav@gmail.com

ಗುರುಪುರ ಕೈಕಂಬ ಶಾಖೆ

ಪೊಂಪೈ ಕಾಂಪ್ಲೆಕ್ಸ್,
1ನೇ ಮಹಡಿ, ಮುಳೂರು
ಗ್ರಾಮ, ಕಿನ್ನಿಕಂಬಳ ಅಂಚೆ,
ಮಂಗಳೂರು–574151
Ph : 0824-2258882
Email :bcccsgurpk@gmail.com

ಸಿದ್ದಕಟ್ಟೆ ಶಾಖೆ

ಮಂಜರಾ ಕಾಂಪ್ಲೆಕ್ಸ್, ನೆಲ ಮಹಡಿ
ಕುಕ್ಕಿಪಾಡಿ ಗ್ರಾಮ,
ಸಿದ್ದಕಟ್ಟೆ ಅಂಚೆ
ಬಂಟ್ವಾಳ ತಾಲೂಕು–574237
Ph : 8050210474
Email : bcccssiddakatte@gmail.com

ಬೋಳಿಯಾರ್ ಶಾಖೆ

ಅಮರ್ ದೀಪ್ ಕಾಂಪ್ಲೆಕ್ಸ್,
1ನೇ ಮಹಡಿ,
ಮುಖ್ಯರಸ್ತೆ ಬೋಳಿಯಾರ್ ಗ್ರಾಮ
ಮಂಗಳೂರು–574153
Ph :8904089533
Email : bcccsboliyar@gmail.com

ಕಲ್ಲಡ್ಕ ಶಾಖೆ

ನಾರಾಯಣಕೃಪಾ ಬಿಲ್ಡಿಂಗ್
1ನೇ ಮಹಡಿ,
ಪುಷ್ಪರಾಜ್ ಆಸ್ಪತ್ರೆ ಹತ್ತಿರ, ಮುಖ್ಯರಸ್ತೆ
ಬಾಳ್ತಿಲ ಗ್ರಾಮ, ಕಲ್ಲಡ್ಕ ಅಂಚೆ
ಬಂಟ್ವಾಳ–574222
Ph : 8904089532
Email : bcccskalladka@gmail.com

ಗ್ರಾಮಚಾವಡಿ ಶಾಖೆ

ಆಶೀರ್ವಾದ್ ಕಾಂಪ್ಲೆಕ್ಸ್,
1 ನೇ ಮಹಡಿ,
ಫಜೀರು ಗ್ರಾಮ, ಉಳ್ಳಾಲ
ಗ್ರಾಮಚಾವಡಿ – 574199
Ph : 8050296375
Email : bcccsgramachavadi@gmail.com

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ

ರಿಜಿಸ್ಟರ್ ನಂಬ್ರ 13754/97–98

ರೋಯಲ್ ಕಾಂಪ್ಲೆಕ್ಸ್, 1ನೇ ಮಹಡಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮುಖ್ಯ ರಸ್ತೆ, ಬಿ.ಸಿ.ರೋಡ್, ಜೋಡುಮಾರ್ಗ, ಬಂಟ್ವಾಳ ತಾಲೂಕು –574219,

2025–26ನೇ ಸಾಲಿನ ವಾರ್ಷಿಕ ಮಹಾಸಭೆ

ಮಾನ್ಯ ಸದಸ್ಯರೇ,

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಇದರ 2025–26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ **20–09–2026** ರಂದು **ಆದಿತ್ಯವಾರ ಪೂರ್ವಾಹ್ನ ಗಂಟೆ 11:00**ಕ್ಕೆ ಸರಿಯಾಗಿ 'ಸ್ವರ್ಣಾ ಕಲಾ ಮಂದಿರ' ಬಿ.ಸಿ.ರೋಡು ಜೋಡುಮಾರ್ಗ ಉದ್ಯಾನವನದ ಬಳಿ ಸಂಘದ ಅಧ್ಯಕ್ಷರಾದ ಶ್ರೀ ಜೀವನ್ ಲೋಯ್ಡ್ ಪಿಂಟೊ ಇವರ ಅಧ್ಯಕ್ಷತೆಯಲ್ಲಿ ಜರುಗಲಿರುವುದು. ಸಂಘದ ಸರ್ವ ಸದಸ್ಯರು ಸಕಾಲದಲ್ಲಿ ಹಾಜರಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಸಹಿ/–

ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಜೋಡುಮಾರ್ಗ

ತಾರೀಕು : 21–08–2026

ಕಾರ್ಯಸೂಚಿ

		ಪುಟ ಸಂಖ್ಯೆ
1.	ಪ್ರಾರ್ಥನೆ.	
2.	ಸ್ವಾಗತ.	
3.	ಗತ ವರ್ಷದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚನೆ.	
4.	ಮಹಾಸಭೆಯ ನೋಟೀಸನ್ನು ಓದಿ ದೃಢೀಕರಿಸುವುದು.	3
5.	2024–25ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು.	4–5
6.	2025–26ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮಂಡನೆ ಮತ್ತು ಅಂಗೀಕಾರ.	6–16
7.	2025–26ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಬಿಟ್ಟು ಹೋದ ಸದಸ್ಯರ ಅನುಮೋದನೆ.	6
8.	2025–26ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ.	21–25
9.	2025–26ನೇ ಸಾಲಿನ ಬಜೆಟ್ ಮೀರಿದ ಖರ್ಚುಗಳನ್ನು ಮಂಜೂರು ಮಾಡುವುದು.	18
10.	2025–26ನೇ ಸಾಲಿನ ಬಳಸಿದ ನಿಧಿಗಳನ್ನು ಮಂಜೂರು ಮಾಡುವುದು.	10
11.	2025–26ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ.	19
12.	2025–26ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸುವುದು ಮತ್ತು ಪಾಲು ಮುನಾಫೆ ಮಂಜೂರು ಮಾಡುವುದು.	18
13.	2026–27ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ ಮಂಜೂರು ಮಾಡುವುದು.	20
14.	ಉಪವಿಧಿಸಂಖ್ಯೆ 69(1) ತಿದ್ದುಪಡಿ.	19
15.	2026–27ನೇ ಸಾಲಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 63 ರಂತೆ ಸಂಘದ ಶಾಸನಬದ್ಧ ಲೆಕ್ಕ ಪರಿಶೋಧನೆಗೆ ಸನ್ನದು ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ.	14
16.	ಮುಂದಿನ ಯೋಜನೆಗಳನ್ನು ಮಂಜೂರು ಮಾಡುವುದು.	15
17.	ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.	
18.	ವಂದನಾರ್ಪಣೆ.	
19.	ರಾಷ್ಟ್ರಗೀತೆ.	
20.	ಸಹಭೋಜನ.	

ವಿ. ಸೂ.: **1. ಮಹಾಸಭೆಯಲ್ಲಿ ಭಾಗವಹಿಸಲು ಸಂಘದ ಸದಸ್ಯರಿಗೆ ಮಾತ್ರ ಅವಕಾಶ.**

2. ಹಾಜರಾತಿ ದಾಖಲಾತಿ ಸಂದರ್ಭದಲ್ಲಿ ನೋಟೀಸು ಅಥವಾ ಸದಸ್ಯರ ಗುರುತಿನ ಚೀಟಿ (ID Card) ದಾಖಲೆಯನ್ನು ಹಾಜರುಪಡಿಸತಕ್ಕದ್ದು.

3. ಸದಸ್ಯರ ಗುರುತಿನ ಚೀಟಿ (ID Card) ಪಡೆಯದೆ ಇದ್ದ ಸದಸ್ಯರು ದಿ: 19–09–2026ರೊಳಗೆ ಪ್ರಧಾನ ಕಛೇರಿಗೆ ಭೇಟಿ ನೀಡಿ ಪಡೆಯತಕ್ಕದ್ದು.

4. ಹಾಜರಾತಿ ದಾಖಲಿಸಲು ಅಪರಾಹ್ನ ಗಂಟೆ 12:30ರ ವರೆಗೆ ಮಾತ್ರ ಕೌಂಟರ್ ತೆರೆದಿರುತ್ತದೆ. ಆದ್ದರಿಂದ ಸದಸ್ಯರು ಕ್ಲಪ್ತ ಸಮಯಕ್ಕೆ ಬಂದು ಹಾಜರಾತಿ ಪಡೆಯುವುದು.

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ

ರೋಯಲ್ ಕಾಂಪ್ಲೆಕ್ಸ್, 1ನೇ ಮಹಡಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು,
ಮುಖ್ಯ ರಸ್ತೆ, ಬಿ.ಸಿ.ರೋಡ್, ಜೋಡುಮಾರ್ಗ, ಬಂಟ್ವಾಳ ತಾಲೂಕು –574219

2024–25 ಸಾಲಿನ ಮಹಾಸಭೆಯ ನಡವಳಿಗಳು

ದಿನಾಂಕ 14–09–2025 ಆದಿತ್ಯವಾರ ಬೆಳಿಗ್ಗೆ ಗಂಟೆ 11.00ಕ್ಕೆ ಸರಿಯಾಗಿ 'ಸ್ಪರ್ಶಾ ಕಲಾ ಮಂದಿರ', ಬಿ.ಸಿ.ರೋಡು, ಜೋಡುಮಾರ್ಗ ಉದ್ಯಾನವನದ ಬಳಿ ಇಲ್ಲಿ ಜರುಗಿದ ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ) ಇದರ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗಳು. ಸಭೆಯ

ಅಧ್ಯಕ್ಷರು : **ಶ್ರೀ ಜೀವನ್ ಲೋಯ್ಡ್ ಪಿಂಟೊ**

ಒಟ್ಟು ಹಾಜರಾತಿ : **1688**

ಕಾರ್ಯಸೂಚಿ

1. ಪ್ರಾರ್ಥನೆ	ಮಹಾಸಭೆಯು ಸುಸೂತ್ರವಾಗಿ ನಡೆಯಲು ಸಂಘದ ನೌಕರರು ದೇವರ ಆಶೀರ್ವಾದವನ್ನು ಪ್ರಾರ್ಥನೆ ಮುಖಾಂತರ ಕೋರಿದರು.
2. ಅಧ್ಯಕ್ಷರ ಆಸನ ಸ್ವೀಕಾರ ಹಾಗೂ ಸ್ವಾಗತ	ಸಂಘದ ಅಧ್ಯಕ್ಷರಾದ ಶ್ರೀ ಜೀವನ್ ಲೋಯ್ಡ್ ಪಿಂಟೊ ಇವರು ಸಭೆಯ ಅಧ್ಯಕ್ಷ ಸ್ಥಾನ ಸ್ವೀಕರಿಸಿ 2024–25ನೇ ಸಾಲಿನ ವಾರ್ಷಿಕ ಮಹಾಸಭೆಗೆ ಸರ್ವ ಸದಸ್ಯರನ್ನು ಸ್ವಾಗತಿಸಿದರು.
3. ಗತ ವರ್ಷದಲ್ಲಿ ಮೃತಪಟ್ಟ ಸಂಘದ ಸದಸ್ಯರಿಗೆ ಸಂತಾಪ ಸೂಚನೆ	ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸ್ಥಾಪನೆಗೆ ಕಾರಣಕರ್ತರಾಗಿದ್ದ ಸ್ಥಾಪಕ ಅಧ್ಯಕ್ಷರಾದ ದಿ। ಲಿಗೋರಿ ಲೋಬೊ ಹಾಗೂ ಸಂಘದ ನಿರ್ದೇಶಕರಾದಂತಹ ದಿ। ಡೇನಿಯಲ್ ತಾವ್ರೊ, ದಿ। ಜೋಸೆಫ್ ವೇಗಸ್ ಹಾಗೂ ದಿ। ಲಿಲ್ಲಿ ಡಿಸೋಜ ಗತಸಾಲಿನಲ್ಲಿ ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಗೌರವ ಸಲ್ಲಿಸಲಾಯಿತು. ಅಂತೆಯೇ ಸಂಘದ ಅಭಿವೃದ್ಧಿಗೆ ಕಾರಣಕರ್ತರಾಗಿ ಗತ ಸಾಲಿನಲ್ಲಿ ದೈವಾಧೀನರಾದ ಎಲ್ಲಾ ಸದಸ್ಯರ ಆತ್ಮಕ್ಕೆ ಗೌರವ ಸಲ್ಲಿಸಲಾಯಿತು.
4. ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದೃಢೀಕರಿಸುವುದು	2024–25ನೇ ಸಾಲಿನ ಸರ್ವಸದಸ್ಯರ ಸಭೆಯ ನೋಟೀಸನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜರವರು ಓದಿ ಹೇಳಿದರು ಹಾಗೂ ಸರ್ವಾನುಮತದಿಂದ ದೃಢೀಕರಿಸಲಾಯಿತು.
5. 2023–24ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು	2023–24ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಸರ್ವಾನುಮತದಿಂದ ದಾಖಲಿಸಲಾಯಿತು.
6. 2024–25ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮಂಡನೆ ಮತ್ತು ಅಂಗೀಕಾರ	2024–25ನೇ ಸಾಲಿನ ಆಡಳಿತ ವರದಿಯನ್ನು ಮಂಡಿಸಲಾಯಿತು ಹಾಗೂ ಸರ್ವಾನುಮತದಿಂದ ಅಂಗೀಕರಿಸಲಾಯಿತು.
7. 2024–25ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ	2024–25ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮಂಡಿಸಲಾಯಿತು ಹಾಗೂ ಸರ್ವಾನುಮತದಿಂದ ಅಂಗೀಕರಿಸಲಾಯಿತು.

8. 2024–25ನೇ ಸಾಲಿನ ಬಜೆಟ್ ಮೀರಿದ ಖರ್ಚುಗಳನ್ನು ಮಂಜೂರು ಮಾಡುವುದು	2024–25ನೇ ಸಾಲಿನ ಬಜೆಟ್ ಮೀರಿದ ಖರ್ಚುಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.
9. 2024–25ನೇ ಸಾಲಿನ ಬಳಸಿದ ನಿಧಿಗಳನ್ನು ಮಂಜೂರು ಮಾಡುವುದು	2024–25ನೇ ಸಾಲಿನ ಬಳಸಿದ ನಿಧಿಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.
10. 2024–25ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ	2024–25ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಸೂಚಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ ವರದಿಯನ್ನು ನೀಡಲಾಯಿತು.
11. 2024–25ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸುವುದು ಮತ್ತು ಪಾಲು ಮುನಾಫೆ ಮಂಜೂರು ಮಾಡುವುದು	ಸದಸ್ಯರು ನಿವ್ವಳ ಲಾಭದ ವಿಂಗಡನೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಪ್ರತಿಕ್ರಿಯಿಸಿ ನಿಧಿಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಿದರು. ನಂತರ 2024–25ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸಲಾಯಿತು ಮತ್ತು 2024–25ನೇ ಸಾಲಿಗೆ ಸದಸ್ಯರಿಗೆ ಶೇ.18ರಷ್ಟು ಪಾಲು ಮುನಾಫೆ ಮಂಜೂರು ಮಾಡಲಾಯಿತು.
12. 2025–26ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ ಮಂಜೂರು ಮಾಡುವುದು	2025–26ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.
13. 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ	2025–26 ನೇ ಸಾಲಿಗೆ ಲೆಕ್ಕಪರಿಶೋಧಕರಾಗಿ ಸಿ.ಎ. ರಾಜರತ್ನಂ ಹೆಚ್ ಮೊಗೆರಾಯ ರತ್ನಂ & ಕಂ., ಚಾರ್ಟರ್ಡ್ ಅಕೌಂಟೆಂಟ್ಸ್ ಮಂಗಳೂರು ಇವರನ್ನು ಸರ್ವಾನುಮತದಿಂದ ನೇಮಕ ಮಾಡಲಾಯಿತು.
14. ಮುಂದಿನ ಯೋಜನೆಗಳನ್ನು ಮಂಜೂರು ಮಾಡುವುದು	ಮುಂದಿನ ಯೋಜನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.
15. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು	ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳಲ್ಲಿ, ಸದಸ್ಯರು ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಇತರ ಪ್ರಶ್ನೆಗಳನ್ನು ಕೇಳಿರುತ್ತಾರೆ ಸದಸ್ಯರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರ ನೀಡಿರುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಕ್ಷಕರಾದ ಶ್ರೀಮತಿ ಮ್ಯಾಗ್ನೆಟ್ ಮರ್ಲಿನ್ ಡಿಸೋಜ ಹಾಗೂ ಶ್ರೀಮತಿ ಟ್ರೀಜಾ ವಿ. ಡಿಮೆಲ್ಲೊ ಹಾಗೂ ಭರತನಾಟ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕು. ರೆಮೊನಾ ಇವೆಟ್ ಪಿರೇರಾ ಅದೇ ರೀತಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕು. ರೀಶಲ್ ಮೆಲ್ಬಾ ಕ್ರಾಸ್ತಾ ಇವರುಗಳಿಗೆ ಸನ್ಮಾನಿಸಲಾಯಿತು.
16. ವಂದನಾರ್ಪಣೆ	ಸಂಘದ ಉಪಾಧ್ಯಕ್ಷರಾದ ಶ್ರೀ ವಲೇರಿಯನ್ ಬರೆಟ್ಟೊ ಇವರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ ಸರ್ವರಿಗೂ ವಂದನೆಗಳನ್ನು ಅರ್ಪಿಸಿದರು. ರಾಷ್ಟ್ರಗೀತೆ ಹಾಗೂ ಸಹಭೋಜನದೊಂದಿಗೆ 2024–25ನೇ ಸಾಲಿನ ಮಹಾಸಭೆಯು ಮುಕ್ತಾಯಗೊಂಡಿತು.

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಜೋಡುಮಾರ್ಗ, ಬಿ. ಸಿ. ರೋಡ್

2025-2026ನೇ ಸಾಲಿನ ಆಡಳಿತ ವರದಿ

ಗೌರವಾನ್ವಿತ ಸದಸ್ಯರೇ,

1997ನೇ ಇಸವಿಯಲ್ಲಿ ಸ್ಥಾಪನೆಗೊಂಡ ನಮ್ಮ ಸಂಘವು 29ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು, ಈ ಅವಧಿಯಲ್ಲಿ ಸದಸ್ಯರ ವಿಶ್ವಾಸ, ಸಹಕಾರ ಮತ್ತು ಪ್ರೋತ್ಸಾಹದಿಂದ ನಿರಂತರವಾಗಿ ಪ್ರಗತಿಯತ್ತ ಮುನ್ನಡೆಯುತ್ತಾ ಬಂದಿದೆ. ಸಂಘದ ಬೆಳವಣಿಗೆಯಲ್ಲಿ ಸದಸ್ಯರು, ಗ್ರಾಹಕ ಹಿತೈಷಿಗಳು, ಇಲಾಖಾ ಅಧಿಕಾರಿಗಳು ನೀಡಿದ ಸಹಕಾರ ಮತ್ತು ಮಾರ್ಗದರ್ಶನವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ.

"ಸದಸ್ಯರ ವಿಶ್ವಾಸವೇ ಸಂಘದ ಬಲ, ಸಂಘದ ಪ್ರಗತಿಯೇ ನಮ್ಮೆಲ್ಲರ ಹೆಮ್ಮೆ"ಎಂಬ ಸದಾಶಯದೊಂದಿಗೆ, ಸದಸ್ಯರ ಹಿತಾಸಕ್ತಿಗೆ ಆದ್ಯತೆ ನೀಡಿ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಸಂಘವು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. 2025-26ನೇ ಸಾಲಿನಲ್ಲಿ ಸಂಘವು ಸಾಧಿಸಿದ ಪ್ರಗತಿ, ಕೈಗೊಂಡ ಪ್ರಮುಖ ಕಾರ್ಯಚಟುವಟಿಕೆಗಳು ಹಾಗೂ ಆರ್ಥಿಕ ಸಾಧನೆಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಸಂತೋಷವಾಗುತ್ತಿದೆ.

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಇದರ 2025-26ನೇ ಸಾಲಿನ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರಿಗೂ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತಾ, ಸಂಘದ ಮುಂದಿನ ಬೆಳವಣಿಗೆಗೆ ತಮ್ಮ ಅಮೂಲ್ಯ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನವನ್ನು ನೀಡುವ ಮೂಲಕ ಸಂಘದ ಪ್ರಗತಿಗೆ ಕೈಜೋಡಿಸುವಂತೆ ಆತ್ಮೀಯವಾಗಿ ಆಹ್ವಾನಿಸುತ್ತೇವೆ.

ಸದಸ್ಯರು ಮತ್ತು ಪಾಲು ಬಂಡವಾಳ :

ನಮ್ಮ ಸಂಘವು ದಿನಾಂಕ 01-09-1997ರಂದು ನೋಂದಾವಣೆಯಾಗಿರುತ್ತದೆ. ದಿನಾಂಕ 31-03-1998 ರಂದು 865 ಸದಸ್ಯರಿಂದ ರೂ. 6,43,210.00 ಪಾಲು ಬಂಡವಾಳದಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯಲ್ಲಿ ದಿನಾಂಕ 31-03-2026ಕ್ಕೆ 5522 'ಎ' ವರ್ಗ ಸದಸ್ಯರು, 8465 'ಡಿ ವರ್ಗ ಸದಸ್ಯರು ಮತ್ತು 3190 'ಸಿ' ವರ್ಗದ ಸದಸ್ಯರಿದ್ದು ಇವರ ವರ್ಗವಾರು ವಿವರ ಈ ಕೆಳಗಿನಂತಿದೆ.

ವರ್ಗ	31-3-2025ರ ಅಂತ್ಯಕ್ಕೆ ಇದ್ದ ಸದಸ್ಯರು	2025-26ನೇ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು	2025-26ನೇ ಸಾಲಿನಲ್ಲಿ ಬಿಟ್ಟುಹೋದ ಸದಸ್ಯರು	31-3-2026ರ ಅಂತ್ಯಕ್ಕೆ ಇದ್ದ ಸದಸ್ಯರು
'ಎ' ತರಗತಿ	5126	421	25	5522
'ಡಿ' ತರಗತಿ	8254	231	20	8465
'ಸಿ' ತರಗತಿ	2691	960	461	3190

ದಿನಾಂಕ 31-03-2026ರಂದು ಸಂಘವು ಒಟ್ಟು ರೂ. 3,94,59,100.00 ಪಾಲುಬಂಡವಾಳ ಹೊಂದಿರುತ್ತದೆ. ಇದರ ವರ್ಗವಾರು ವಿವರ ಈ ಕೆಳಕಂಡಂತಿದೆ.

ವಿವರಗಳು	'ಎ' ತರಗತಿ		'ಡಿ' ತರಗತಿ		'ಸಿ' ತರಗತಿ	
	ಸದಸ್ಯರು	ಪಾಲು ಬಂಡವಾಳ	ಸದಸ್ಯರು	ಪಾಲು ಬಂಡವಾಳ	ಸದಸ್ಯರು	ಪಾಲು ಬಂಡವಾಳ
31-03-2022	4438	2,69,46,600.00	6915	69,41,400.00	2332	46,640.00
31-03-2023	4714	2,79,02,800.00	7618	77,18,000.00	2057	41,140.00
31-03-2024	4921	2,87,98,200.00	8110	87,65,700.00	2794	55,880.00
31-03-2025	5126	2,98,52,700.00	8254	88,65,600.00	2691	53,820.00
31-03-2026	5522	3,03,59,600.00	8465	90,35,700.00	3190	63,800.00


ವರದಿ ಸಾಲಿನಲ್ಲಿ ಪಾಲು ಬಂಡವಾಳವು ರೂ. 6.87 ಲಕ್ಷ ಹೆಚ್ಚಳವಾಗಿದ್ದು, ಇದು ಕಳೆದ ಸಾಲಿಗಿಂತ ಶೇ. 1.77ರಷ್ಟು ವೃದ್ಧಿಯಾಗಿರುತ್ತದೆ.

ಠೇವಣಿಗಳು :

2025–26ನೇ ಸಾಲಿನಲ್ಲಿ ರೂ. 742.15 ಕೋಟಿ ಠೇವಣಿ ಸಂಗ್ರಹಿಸಲಾಗಿದೆ ಹಾಗೂ ರೂ. 714.22 ಕೋಟಿ ಠೇವಣಿಯನ್ನು ಮರುಪಾವತಿಸಲಾಗಿದೆ. ದಿ. 31–03–2026 ರಂದು ಸಂಘವು ಒಟ್ಟು ರೂ. 149.85 ಕೋಟಿ ಠೇವಣಿಯನ್ನು ಹೊಂದಿರುತ್ತದೆ. ಕಳೆದ ಸಾಲಿಗಿಂತ ಶೇ.22.91 ರಷ್ಟು ಠೇವಣಿಯು ವೃದ್ಧಿಯಾಗಿರುತ್ತದೆ.ಸದಸ್ಯರು ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಮಾಡಿರುವುದರಿಂದ ಈ ವೃದ್ಧಿ ಸಾಧ್ಯವಾಗಿದೆ.

ವಿವರಗಳು ಈ ಕೆಳಗಿನಂತಿದೆ :

ಕ್ರ ಸಂ	ಠೇವಣಿಗಳ ವಿವರಗಳು	ದಿ: 31–03–2025ಕ್ಕೆ ಇದ್ದಂತೆ	ದಿ: 31–03–2026ಕ್ಕೆ ಇದ್ದಂತೆ
1	ನಿರಖು ಠೇವಣಿಗಳು	106,42,03,918.00	132,71,99,315.00
2.	ವಿಶೇಷ ನಗದು ಠೇವಣಿ	55,81,919.00	65,31,415.00
3	ಸ್ವರ್ಣ ನಗದು ಠೇವಣಿ	33,55,113.00	27,53,466.00
4	ಆವರ್ತ ಠೇವಣಿ	1,38,39,100.00	1,82,41,398.00
5	ಉಳಿತಾಯ ಖಾತೆ	9,58,64,104.71	10,62,51,045.80
6	ಚಾಲ್ತಿ ಖಾತೆ	6,29,376.05	70,102.45
7	ನಿತ್ಯ ನಿಧಿ ಠೇವಣಿ	3,03,71,785.00	3,08,74,275.00
8	ಅವಧಿ ದಾಟಿದ ಠೇವಣಿ	3,038.00	3,038.00
9	ಪಿಗ್ಮಿ ಏಜೆಂಟ್ ಭದ್ರತಾ ಠೇವಣಿ	29,62,309.00	33,43,002.00
10	ಸರಾಫರ ಭದ್ರತಾ ಠೇವಣಿ	9,35,926.00	12,63,856.00
11	ನೌಕರರ ಭದ್ರತಾ ಠೇವಣಿ	14,66,769.00	19,77,576.00
	ಒಟ್ಟು	**121,92,13,357.76**	**149,85,08,489.25**




ಸದಸ್ಯರ ಸಾಲಗಳು :

2025–26ನೇ ಸಾಲಿನಲ್ಲಿ ಒಟ್ಟು ರೂ. 433.36 ಕೋಟಿ ಸಾಲವನ್ನು ಸದಸ್ಯರಿಗೆ ನೀಡಲಾಗಿದೆ ಹಾಗೂ ರೂ. 407.51 ಕೋಟಿ ಸಾಲವನ್ನು ವಸೂಲು ಮಾಡಲಾಗಿದೆ. 2025–26 ಸಾಲಿನಲ್ಲಿ ಶೇಕಡಾ 98.27ರಷ್ಟು ಸಾಲ ವಸೂಲಿಯಾಗಿರುತ್ತದೆ ಎಂದು ಹೇಳಲು ಸಂತೋಷವಾಗುತ್ತಿದೆ. ದಿನಾಂಕ 31–03–2026ರಂದು ಹೊರಬಾಕಿ ಸಾಲ ರೂ. 136.64 ಕೋಟಿ ಇರುತ್ತದೆ. ಕಳೆದ ಸಾಲಿಗಿಂತ ಶೇಕಡಾ 23.33 ರಷ್ಟು ವೃದ್ಧಿಯಾಗಿದೆ.

ವಿವರಗಳು ಈ ಕೆಳಗಿನಂತಿದೆ :

ಕ್ರ ಸಂ	ಸಾಲಗಳ ವಿವರ	ದಿ: 31–03–2025ಕ್ಕೆ ಇದ್ದಂತೆ	ದಿ: 31–03–2026ಕ್ಕೆ ಇದ್ದಂತೆ
1	ಗೃಹ ಸಾಲ	12,58,31,578.43	11,16,35,143.33
2	ವಾಹನ ಸಾಲ	3,75,71,276.00	3,66,06,354.00
3	ಚಿನ್ನಾಭರಣ ಸಾಲ	74,30,96,618.80	103,02,54,506.76
4	ಠೇವಣಿ ಆಧಾರಿತ ಸಾಲ	1,62,56,574.00	1,54,75,049.00
5	ಅಡಮಾನ ಸಾಲ	15,82,82,321.00	15,22,69,064.08
6	ಭದ್ರತಾ ಸಾಲ	2,39,992.00	4,54,163.00
7	ಸ್ವ–ಉದ್ಯೋಗ ಮತ್ತು ವ್ಯಾಪಾರ ಸಾಲ	1,09,24,638.00	69,02,615.00
8	ಜಾಮೀನು ಸಾಲ	1,54,96,687.20	1,27,12,428.20
9	ನೌಕರರ ಸಾಲ	1,79,258.00	62,604.00
	ಒಟ್ಟು	**110,78,78,943.43**	**136,63,71,927.37**



ಸಾಲ ಪಡೆದು ಸಕಾಲದಲ್ಲಿ ಮರುಪಾವತಿಸಿದ ಎಲ್ಲಾ ಸಾಲಗಾರ ಸದಸ್ಯರಿಗೆ ಹೃದಯಸ್ಪರ್ಶಿ ಕೃತಜ್ಞತೆಗಳು ಹಾಗೂ ಸಾಲ ಪಡಕೊಂಡ ಎಲ್ಲಾ ಸದಸ್ಯರು ಕ್ರಮಬದ್ಧವಾಗಿ ಸಾಲವನ್ನು ಕ್ಲಪ್ತ ಸಮಯಕ್ಕೆ ಮರುಪಾವತಿ ಮಾಡಿ ಸಂಸ್ಥೆಯನ್ನು ಪ್ರಗತಿಯತ್ತ ಮುನ್ನಡೆಸಲು ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ನಿಧಿಗಳು ಮತ್ತು ದುಡಿಯುವ ಬಂಡವಾಳ :

ವರದಿ ಸಾಲಿನಲ್ಲಿ ಒಟ್ಟು ರೂ.11,72,05,133.96 ವಿವಿಧ ನಿಧಿಗಳಿರುತ್ತವೆ. ಸಂಘದ ಕಾದಿರಿಸಿದ ನಿಧಿಯಲ್ಲಿ ಒಟ್ಟು ಮೊತ್ತ ರೂ.4,40,34,528.00 ಜಮೆ ಇದ್ದು, ರೂ.3,19,67,408.00 ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನಲ್ಲಿ ಗುಂತಾಯಿಸಲಾಗಿದೆ. ದಿ: 19–03–2024 ರ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಆದೇಶ ನಂಬ್ರ ಆರ್ಸಿಎಸ್/ಯುಬಿಸಿ–5/304/ನಿ.ಖ.ಅ/2023–24 ಪ್ರಕಾರ ರೂ.1,50,83,900.00 ಮೊತ್ತವನ್ನು ಹಿಂಪಡೆದು ಸಂಘಕ್ಕೆ ಸ್ವಂತ ನಿವೇಶನ ಖರೀದಿಗಾಗಿ ಉಪಯೋಗಿಸಲಾಗಿದ್ದು, ಈ ಆದೇಶದ ಪ್ರಕಾರ ಹಿಂಪಡೆದ ಮೊತ್ತವನ್ನು 10 ವಾರ್ಷಿಕ ಸಮಾನ ಕಂತುಗಳಲ್ಲಿ ಮರುಪಾವತಿಸಲು ವಿಧಿಸಲಾದ ಶರ್ತಗಳ ಪ್ರಕಾರ, 2 ಕಂತುಗಳು ಅಂದರೆ ರೂ. 30,16,780.00 ಮರು ಪಾವತಿ ಮಾಡಲಾಗಿದ್ದು, ರೂ. 1,20,67,120.00 ಪಾವತಿ ಮಾಡಲು ಬಾಕಿಯಿರುತ್ತದೆ.

ದಿನಾಂಕ 31–3–2026 ಕ್ಕೆ ಸಂಘದ ದುಡಿಯುವ ಬಂಡವಾಳ ರೂ. 165,51,72,723.21 ಆಗಿರುತ್ತದೆ. ಈ ಪ್ರಗತಿಗೆ ಸಹಕರಿಸಿದ ಎಲ್ಲಾ ಸದಸ್ಯರಿಗೂ ಸಂಘದ ಆಡಳಿತ ಮಂಡಳಿಯು ಆಭಾರಿಯಾಗಿದೆ.

ದಿ: 31–03–2026 ಕ್ಕೆ ಇರುವ ನಿಧಿಗಳ ವಿವರ :

ಕ್ರ. ಸಂ	ವಿವರ	ಮೊಬಲಗು (ರೂ)
1	ಕಾದಿರಿಸಿದ ನಿಧಿ	4,40,34,528.00
2	ಸದಸ್ಯರ ಕಲ್ಯಾಣ ನಿಧಿ	36,04,107.00
3	ಸದಸ್ಯರ ಮರಣೋತ್ತರ ನಿಧಿ	3,00,000.00
4	ನೌಕರರ ಕಲ್ಯಾಣ ನಿಧಿ	17,53,640.04
5	ಕೆಟ್ಟ ಮತ್ತು ಕರಡು ಸಾಲದ ನಿಧಿ	60,94,500.00
6	ಧಾರ್ಮಿಕ ನಿಧಿ	8,000.00
7	ಸಾರ್ವಜನಿಕ ಉಪಕಾರ ನಿಧಿ	4,050.00
8	ಸಾಮಾನ್ಯ ನಿಧಿ	32,41,000.00
9	ಗ್ರಾಚ್ಯುವಿಟಿ ನಿಧಿ	59,48,188.82
10	ಜಾಹೀರಾತು ನಿಧಿ	9,61,500.00
11	ಜುಬಿಲಿ ನಿಧಿ	10,09,943.58
12	ಕಟ್ಟಡ ನಿಧಿ	2,67,39,424.99
13	ಸವಕಳಿ ನಿಧಿ	1,72,29,147.69
14	ನಷ್ಟ ಪರಿಹಾರ ನಿಧಿ	60,20,000.00
15	ಲಾಭಾಂಶ ಸಮೀಕರಣ ನಿಧಿ	2,57,103.84
	ಒಟ್ಟು	**11,72,05,133.96**

ಉಪಯೋಗಿಸಿದ ನಿಧಿಗಳ ವಿವರ :

1. ಸದಸ್ಯರ ಕಲ್ಯಾಣ ನಿಧಿ :

* ಶ್ರೀ ಗ್ರೇನ್‌ವೆಲ್ ಕ್ರಾಸ್ತ, ಮೊಡಂಕಾಪು, ಸದಸ್ಯ ನಂಬ್ರ A 4815 ಇವರಿಗೆ ಕಿಡ್ನಿ ಡಯಾಲಿಸಿಸ್ ವೈದ್ಯಕೀಯ ವೆಚ್ಚಕ್ಕಾಗಿ ನೀಡಿದ ಆರ್ಥಿಕ ಸಹಾಯಧನ ರೂ.20,000/–
* ಶ್ರೀಮತಿ ಐರಿನ್ ಡಿಸೋಜ, ಮೊಡಂಕಾಪು ಸದಸ್ಯ ನಂಬ್ರ A 4227 ಇವರಿಗೆ ಅವರ ಗಂಡನ ಕಾಲಿನ ಶಸ್ತ್ರಚಿಕಿತ್ಸೆಯ ವೈದ್ಯಕೀಯ ವೆಚ್ಚಕ್ಕಾಗಿ ನೀಡಿದ ಆರ್ಥಿಕ ಸಹಾಯಧನ ರೂ.10,000/–
* ಶ್ರೀ ಪಿ.ಕೆ. ಮಾಧವ ಭಟ್, ವಾಮದಪದವು, ಸದಸ್ಯ ನಂಬ್ರ D 508 ಹಾಗೂ ಸಂಘದ ಪಿಗ್ಮಿ ಏಜೆಂಟ್ ಇವರಿಗೆ ಆರೋಗ್ಯ ಸಮಸ್ಯೆಯಿಂದಾಗಿ ಆರ್ಥಿಕ ಸಂಕಷ್ಟ ಉಂಟಾದ ಹಿನ್ನೆಲೆಯಲ್ಲಿ, ಸಂಘದ ವತಿಯಿಂದ ನೀಡಿದ ಆರ್ಥಿಕ ಸಹಾಯಧನ ರೂ.10,000/–
* ಶ್ರೀ ವಲ್ಲಿ ಫೆರ್ನಾಂಡಿಸ್, ವಾಮದಪದವು, ಸದಸ್ಯ ನಂಬ್ರ A 4959 ಇವರಿಗೆ ಮನೆ ದುರಸ್ತಿ ಕಾರ್ಯಕ್ಕಾಗಿ ನೀಡಿದ ಆರ್ಥಿಕ ಸಹಾಯಧನ ರೂ.15,000/–
* ಶ್ರೀ ಸುನಿಲ್ ಡಿಸೋಜ, ಚೇಳೂರು ಸದಸ್ಯ ನಂಬ್ರ A 2650, ಇವರ ಮಗನ ಕಣ್ಣಿನ ಕ್ಯಾನ್ಸರ್ ಚಿಕಿತ್ಸೆಯ ವೈದ್ಯಕೀಯ ವೆಚ್ಚಕ್ಕಾಗಿ ನೀಡಿದ ಆರ್ಥಿಕ ಸಹಾಯಧನ ರೂ.25,000/–

2. ನೌಕರರ ಕಲ್ಯಾಣ ನಿಧಿ :

* ಸಿಬ್ಬಂದಿಗಳ ಪ್ರವಾಸಕ್ಕಾಗಿ ಖರ್ಚು ಮಾಡಿದ ಮೊತ್ತ ರೂ.25,000/–

3. ಸಾಮಾನ್ಯ ನಿಧಿ :

* ಶ್ರೀ ರೋಷನ್ ಸುನಿಲ್ ಪಾಯ್ಸ್, ವಿಟ್ಲ ಇವರಿಗೆ ಅಮೆರಿಕಾದಲ್ಲಿ ನಡೆದ 'ನ್ಯಾಚುರಲ್ ಒಲಿಂಪಿಯಾ' ಅಂತರಾಷ್ಟ್ರೀಯ ಬಾಡಿಬಿಲ್ಡಿಂಗ್ ಕ್ರೀಡಾಕೂಟದಲ್ಲಿ ಭಾಗವಹಿಸಲು ನೀಡಿದ ಆರ್ಥಿಕ ಸಹಾಯಧನ ರೂ.20,000/–
* 'ಮೈ ಡಿಯರ್ ಫಾದರ್' ಕೊಂಕಣಿ ಚಲನಚಿತ್ರದ ಪ್ರಚಾರಕ್ಕಾಗಿ ಸಂಘದ ವತಿಯಿಂದ ನೀಡಿದ ಮೊತ್ತ ರೂ.2,500/–
* 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಗೆ ಸಂಘದ ವತಿಯಿಂದ ನೀಡಿದ ದೇಣಿಗೆ ಮೊತ್ತ ರೂ.10,000/–

4. ಜಾಹೀರಾತು ನಿಧಿ :

* ದೇವಮಾತಾ ಯುವ ಸಂಚಲನ (ಐ.ಸಿ.ವೈ.ಎಂ) ಮೊಗರ್ನಾಡ್ ಇದರ 40ನೇ ವಾರ್ಷಿಕೋತ್ಸವ ಪ್ರಯುಕ್ತ ಹೊರತಂದ ಸ್ಮರಣ ಸಂಚಿಕೆ ಪುಸ್ತಕಕ್ಕೆ ಜಾಹೀರಾತು ನೀಡಿದ ಮೊತ್ತ ರೂ. 7500/–
* ಕಥೋಲಿಕ್ ಸಭಾ, ಮಂಗಳೂರು ಪ್ರದೇಶ ಇವರ ವತಿಯಿಂದ, ಬಂಟ್ವಾಳ ವಲಯದ ಪ್ರಾಯೋಜಕತ್ವದಲ್ಲಿ ಪ್ರಕಟಗೊಳ್ಳುತ್ತಿರುವ **"ಆಮ್ಚೊ ಸಂದೇಶ್"** ಮಾಸಿಕ ಪತ್ರಿಕೆಯ ಸಂಚಿಕೆಯಲ್ಲಿ ಸಂಸ್ಥೆಯ ಜಾಹೀರಾತು ಪ್ರಕಟಣೆಗಾಗಿ ನೀಡಿದ ಮೊತ್ತ ರೂ.12,000/–
* ಕಥೋಲಿಕ್ ಸಭಾ, ಮಂಗಳೂರು ಪ್ರದೇಶ (ರಿ.) ತೊಡಂಬಿಲ ಘಟಕದ ದಶಮಾನೋತ್ಸವದ ಪ್ರಯುಕ್ತ ಹೊರತಂದ ಟೆಲಿಫೋನ್ ಡೈರೆಕ್ಟರಿ ಪುಸ್ತಕಕ್ಕೆ ಪ್ರಾಯೋಜಕತ್ವದ ರೂಪದಲ್ಲಿ ನೀಡಿದ ಮೊತ್ತ ರೂ. 6500/–
* ಹೋಲಿ ಫ್ಯಾಮಿಲಿ ಶಾಲೆ, ಮೇರಮಜಲು ಇದರ ಬೆಳ್ಳಿ ಹಬ್ಬದ ಪ್ರಯುಕ್ತ ಹೊರತಂದ ಸ್ಮರಣ ಸಂಚಿಕೆ ಪುಸ್ತಕಕ್ಕೆ ಜಾಹೀರಾತು ನೀಡಿದ ಮೊತ್ತ ರೂ.10,000/–
* ಸಂತ ವಿನ್ಸೆಂಟ್ ಪಾವ್ಲ್ ಸಭಾ, ಕೇಂದ್ರ ಸಮಿತಿ, ಮಂಗಳೂರು ಇವರ ಶತಮಾನೋತ್ಸವ ಯೋಜನೆಗೆ ಸಂಬಂಧಿಸಿದ ಸ್ಮರಣ ಸಂಚಿಕೆ ಪುಸ್ತಕಕ್ಕೆ ಸಂಘದ ವತಿಯಿಂದ ಜಾಹೀರಾತು ನೀಡಿದ ಮೊತ್ತ ರೂ.12,000/–

5. ಧಾರ್ಮಿಕ ನಿಧಿ :

* ಸೈಂಟ್ ಪ್ಯಾಟ್ರಿಕ್ ಚರ್ಚ್, ಸಿದ್ಧಕಟ್ಟೆ ಇದರ ಶತಮಾನೋತ್ಸವದ ಪ್ರಯುಕ್ತ ಸಂಘದ ವತಿಯಿಂದ ನೀಡಿದ ದೇಣಿಗೆ ಮೊತ್ತ ರೂ.10,000/–

ಇತರ ಬ್ಯಾಂಕಿನ ಸಾಲಗಳು :

ಸಂಸ್ಥೆಯು ಇತರ ಬ್ಯಾಂಕಿನಲ್ಲಿ ಇಟ್ಟಿರುವ ನಿರಖು ಠೇವಣಿ ಆಧಾರದಲ್ಲಿ ಅಗತ್ಯದ ವೇಳೆಯಲ್ಲಿ ಒಟ್ಟು ರೂ.50.15 ಲಕ್ಷ ಸಾಲ ಪಡೆದಿದ್ದು, ಸಂಪೂರ್ಣವಾಗಿ ಮರುಪಾವತಿ ಮಾಡಲಾಗಿದೆ. ದಿ. 31–03–2026ರ ಅಂತ್ಯಕ್ಕೆ ಯಾವುದೇ ಬ್ಯಾಂಕಿನ ಸಾಲ ಬಾಕಿ ಇರುವುದಿಲ್ಲ. ಸಂಘದ ಸದಸ್ಯರಿಂದ ಪಡೆದ ಠೇವಣಿಗಳು ಮತ್ತು ಪಾಲು ಬಂಡವಾಳದಿಂದ ಮಾತ್ರ ವ್ಯವಹಾರ ಮಾಡಲಾಗಿದೆ. ಇನ್ನು ಮುಂದೆ ಕೂಡಾ ಸಂಘದ ಎಲ್ಲಾ ಸದಸ್ಯರು ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಗೂ ಹೆಚ್ಚಿನ ಠೇವಣಿ ಹೂಡಿ ಸಂಸ್ಥೆಯು ಸ್ವಂತ ಬಂಡವಾಳದಿಂದ ಮಾತ್ರ ವ್ಯವಹಾರ ನಡೆಸುವಂತಾಗಲು ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ.

ಧನ ವಿನಿಯೋಗಗಳು :

ದಿನಾಂಕ 31–03–2026ರ ಅಂತ್ಯಕ್ಕೆ ಸಂಘದಲ್ಲಿರುವ ಒಟ್ಟು ವಿನಿಯೋಗಗಳು ರೂ.32,71,39,242.00 ಆಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ಠೇವಣಿಗಳಲ್ಲಿ ವಿನಿಯೋಗಗಳು	31–03–2026ಕ್ಕೆ ಇದ್ದಂತೆ
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಮಂಗಳೂರು	0.99
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು (ರಿಸರ್ವ್ ಫಂಡ್)	319.67
ಆದರ್ಶ ವಿವಿದ್ದೋದ್ದೇಶ ಸಹಕಾರಿ ಸಂಘ ನಿ.,	75.00
ಅಮ್ಮಾಡಿ ವ್ಯವಸಾಯ ಸೇವಾ ಸಹಕಾರಿ ಸಂಘ ನಿ.,	75.00
ಆತ್ಮಶಕ್ತಿ ವಿವಿದೋದ್ದೇಶ ಸಹಕಾರಿ ಸಂಘ ನಿ., ಬಿ.ಸಿ.ರೋಡ್ ಶಾಖೆ	160.00
ಕುಂಬಾರರ ಗುಡಿ ಕೈಗಾರಿಕಾ ಸಹಕಾರಿ ಸಂಘ ನಿ., ಬಿ.ಸಿ.ರೋಡ್ ಶಾಖೆ	80.00
ಕುಂಬಾರರ ಗುಡಿ ಕೈಗಾರಿಕಾ ಸಹಕಾರಿ ಸಂಘ ನಿ., ಫರಂಗಿಪೇಟೆ ಶಾಖೆ	10.00
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಬಿ.ಸಿ.ರೋಡ್ ಶಾಖೆ	490.00
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಬಿ.ಸಿ.ರೋಡ್ ಶಾಖೆ (ಕಟ್ಟಡ ನಿಧಿ)	264.39
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಬಂಟ್ವಾಳ ಶಾಖೆ	50.00
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಫರಂಗಿಪೇಟೆ ಶಾಖೆ	156.38
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಗುರುಪುರ ಕೈಕಂಬ ಶಾಖೆ	30.00
ಸಮಾಜ ಸೇವಾ ಸಹಕಾರಿ ಸಂಘ, ಬಂಟ್ವಾಳ ಶಾಖೆ	124.95
ಸಮಾಜ ಸೇವಾ ಸಹಕಾರಿ ಸಂಘ, ಫರಂಗಿಪೇಟೆ ಶಾಖೆ	375.00
ಶ್ರೀ ಭಗವತಿ ಸಹಕಾರ ಬ್ಯಾಂಕ್ ನಿ. ಬಿ.ಸಿ.ರೋಡ್ ಶಾಖೆ	135.00
ಶ್ರೀ ಗುರುದೇವ ವಿವಿದೋದ್ದೇಶ ಸಹಕಾರಿ ಸಂಘ ನಿ.,	100.00
ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ನಿ. ಬಿ.ಸಿರೋಡ್ ಶಾಖೆ	175.00
ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ನಿ. ಮುಡಿಪು ಶಾಖೆ	25.00
ಸುಮಂಗಲಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ,	370.00
ಟೀಚರ್ಸ್ ಕೋ–ಅಪರೇಟಿವ್ ಸೊಸೈಟಿ ನಿ. ಬಿ.ಸಿರೋಡ್ ಶಾಖೆ	50.00
ವೆಂಕಟರಮಣ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ, ಬಿ.ಸಿ. ರೋಡ್ ಶಾಖೆ	100.00
ವಿಜಯ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ, ಬಿ.ಸಿ. ರೋಡ್ ಶಾಖೆ	105.00
ಒಟ್ಟು	**3,271.39**

ಸಂಘವು ಮೇಲೆ ಕಾಣಿಸಿದ ನಿರಖು ಠೇವಣಿಯಲ್ಲದೆ ದೈನಂದಿನ ವ್ಯವಹಾರಕ್ಕಾಗಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಬಿ.ಸಿ.ರೋಡು, ಬಂಟ್ವಾಳ, ಫರಂಗಿಪೇಟೆ, ಕುಪ್ಪೆಪದವು, ಗುರುಪುರ ಕೈಕಂಬ, ಸಿದ್ಧಕಟ್ಟೆ, ಬೋಳಿಯಾರ್ ಹಾಗೂ ಕಲ್ಲಡ್ಕ, ಶ್ರೀ ಭಗವತಿ ಸಹಕಾರ ಬ್ಯಾಂಕು ಬಿ.ಸಿ.ರೋಡ್, ಗುರುಪುರ ಕೈಕಂಬ, ಎಂ.ಸಿ.ಸಿ. ಬ್ಯಾಂಕು ಬಿ.ಸಿ.ರೋಡ್, ಕೆನರಾ ಬ್ಯಾಂಕ್ ಬಿ.ಸಿ.ರೋಡ್, ಫರಂಗಿಪೇಟೆ, ವಾಮದಪದವು, ಗುರುಪುರ ಕೈಕಂಬ ಮತ್ತು ಬೋಳಿಯಾರ್, ಸಮಾಜ ಸೇವಾ ಸಹಕಾರಿ ಸಂಘ ಫರಂಗಿಪೇಟೆ, ಬಂಟ್ವಾಳ, ಬ್ಯಾಂಕ್ ಆಫ್ ಬರೋಡಾ ಕುಪ್ಪೆಪದವು ಮತ್ತು ಸಿದ್ಧಕಟ್ಟೆ, ಫೆಡರಲ್ ಬ್ಯಾಂಕ್ ಬಿ.ಸಿ.ರೋಡ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬಿ.ಸಿ.ರೋಡು ಮತ್ತು ಬಂಟ್ವಾಳ, ಕರ್ನಾಟಕ ಬ್ಯಾಂಕ್ ಕಲ್ಲಡ್ಕ, ವಾಮದಪದವು, ಭಾರತ್ ಕೋಅಪರೇಟಿವ್ ಬ್ಯಾಂಕ್ ಬಿ.ಸಿ.ರೋಡ್, ಐ.ಸಿ.ಐ.ಸಿ.ಐ ಬ್ಯಾಂಕ್ ಬಂಟ್ವಾಳ ಇಲ್ಲಿ ದೈನಂದಿನ ವ್ಯವಹಾರ ನಡೆಸುತ್ತಿದೆ. ಎಲ್ಲಾ ಬ್ಯಾಂಕುಗಳ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿ ದಿನಾಂಕ: 31–03–2026ರ ಅಂತ್ಯಕ್ಕೆ ಒಟ್ಟು ರೂ. 256.98 ಲಕ್ಷ ಇರುತ್ತದೆ.

ಸ್ಥಿರ–ಚರ ಸೊತ್ತುಗಳು :

ಸಂಘದ ಪ್ರಧಾನ ಕಛೇರಿ ಬಿ.ಸಿ.ರೋಡ್ ಮತ್ತು ಫರಂಗಿಪೇಟೆ ಶಾಖೆಯು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ. ಸದ್ರಿ ಎರಡೂ ಕಟ್ಟಡಗಳು ರೂ.96.67 ಲಕ್ಷದಷ್ಟು ಬೆಲೆಬಾಳುತ್ತದೆ. ಸಂಘವು ಹೊಸ ನಿವೇಶನವನ್ನು ಖರೀದಿಸಿದ್ದು, ಇದರ ಮೌಲ್ಯವು ರೂ.151.33 ಲಕ್ಷದಷ್ಟು ಆಗಿರುತ್ತದೆ. ಸಂಘದ ಒಟ್ಟು ಸ್ಥಿರಾಸ್ತಿ ಮೌಲ್ಯವು ರೂ.248 ಲಕ್ಷ ಆಗಿರುತ್ತದೆ. ಇದು ಒಟ್ಟು ದುಡಿಯುವ ಬಂಡವಾಳದ ಶೇ.1.49 ರಷ್ಟು ಇರುತ್ತದೆ ಹಾಗೂ ಇದರೊಂದಿಗೆ ರೂ.103.20 ಲಕ್ಷದಷ್ಟು ಇತರ ಎಲ್ಲಾ ಚರಸೊತ್ತುಗಳು ಇರುತ್ತವೆ. ಇತರ ಚರಸೊತ್ತುಗಳು ದುಡಿಯುವ ಬಂಡವಾಳದ ಶೇ.0.63 ರಷ್ಟು ಇರುತ್ತದೆ. ಒಟ್ಟು ಸ್ಥಿರಚರ ಸೊತ್ತುಗಳು ದುಡಿಯುವ ಬಂಡವಾಳದ ಶೇ.2.12 ರಷ್ಟು ಇರುತ್ತದೆ. ಎಲ್ಲಾ ಸ್ಥಿರಚರ ಸೊತ್ತುಗಳಿಗೆ ವಿಮೆ ಮಾಡಲಾಗಿದೆ.

ಶಾಖೆಗಳು :

ಸಂಘವು ಪ್ರಸ್ತುತ ಬಿ.ಸಿ.ರೋಡು, ಫರಂಗಿಪೇಟೆ, ಬಂಟ್ವಾಳ, ವಾಮದಪದವು, ಕುಪ್ಪೆಪದವು, ಗುರುಪುರ ಕೈಕಂಬ, ಸಿದ್ದಕಟ್ಟೆ, ಬೋಳಿಯಾರು, ಕಲ್ಲಡ್ಕ ಹಾಗೂ ಗ್ರಾಮಚಾವಡಿ ಶಾಖೆ ಹೀಗೆ ಪ್ರಸ್ತುತ ಒಟ್ಟು 10 ಶಾಖೆಗಳನ್ನು ಹೊಂದಿದೆ. ಎಲ್ಲಾ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಗಣಕೀಕೃತ ವ್ಯವಸ್ಥೆಯ ಮೂಲಕ ಸೇವೆಗಳನ್ನು ಒದಗಿಸುತ್ತಿವೆ.

ಎಲ್ಲಾ ಶಾಖೆಗಳಿಗೂ ಭದ್ರತಾ ದೃಷ್ಟಿಯಿಂದ ಸಿ.ಸಿ. ಕ್ಯಾಮೆರಾಗಳು, ಅಲಾರಂ ವ್ಯವಸ್ಥೆ ಹಾಗೂ ಅಗ್ನಿಶಾಮಕ ಯಂತ್ರಗಳನ್ನು ಅಳವಡಿಸಲಾಗಿದ್ದು, ಸದಸ್ಯರಿಗೆ ಸುರಕ್ಷಿತ ಹಾಗೂ ಉತ್ತಮ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶಾಖೆಗಳು	ಠೇವಣಿಗಳು				
	31–03–2025	ವರದಿ ಸಾಲಿನಲ್ಲಿ ಜಮೆ	ವರದಿ ಸಾಲಿನಲ್ಲಿ ಪಾವತಿ	31–03–2026	ವೃದ್ಧಿ (ಶೇ.)
ಬಿ ಸಿ ರೋಡ್	43,87,27,298.84	118,82,60,201.98	1,10,06,18,147.64	52,63,69,353.18	19.98
ಫರಂಗಿಪೇಟೆ	13,31,59,458.49	152,99,86,875.54	149,08,61,477.56	17,22,84,856.47	29.38
ಬಂಟ್ವಾಳ	29,87,72,961.88	72,47,26,598.81	68,25,52,498.98	34,09,47,061.71	14.12
ವಾಮದಪದವು	9,08,54,588.22	45,97,97,568.50	44,10,70,881.18	10,95,81,275.54	20.61
ಕುಪ್ಪೆಪದವು	4,32,94,996.75	41,23,56,147.40	40,45,69,629.28	5,10,81,514.87	17.98
ಗುರುಪುರ ಕೈಕಂಬ	6,87,54,319.02	123,20,14,380.48	120,90,62,143.32	9,17,06,556.18	33.38
ಸಿದ್ದಕಟ್ಟೆ	4,68,69,090.43	45,25,31,916.10	43,58,00,451.08	6,36,00,555.45	35.70
ಬೋಳಿಯಾರು	3,26,83,754.23	57,64,93,385.21	56,59,98,526.02	4,31,78,613.42	32.11
ಕಲ್ಲಡ್ಕ	3,88,53,694.14	66,65,92,243.94	65,25,93,218.58	5,28,52,719.50	36.03
ಗ್ರಾಮಚಾವಡಿ	2,18,78,191.76	17,73,45,604.67	15,89,02,247.50	4,03,21,548.93	84.30
ಪ್ರಧಾನಕಚೇರಿ	53,65,004.00	13,96,764.00	1,77,334.00	65,84,434.00	22.73
ಒಟ್ಟು	**121,92,13,357.76**	**742,15,01,686.63**	**714,22,06,555.14**	**149,85,08,489.25**	**22.91**

ಶಾಖೆಗಳು	ಹೊರ ಬಾಕಿ ಸಾಲಗಳು					
	31–03–2025	ವರದಿ ಸಾಲಿನಲ್ಲಿ ಮರು ಪಾವತಿಯಾದ ಸಾಲ	ವರದಿ ಸಾಲಿನಲ್ಲಿ ನೀಡಿದ ಸಾಲ	31–03–2026	ವೃದ್ಧಿ (%)	ಸಾಲ ವಸೂಲಾತಿ (%)
ಬಿ. ಸಿ. ರೋಡ್	17,65,81,090.13	38,39,74,691.58	39,68,76,994.18	18,94,83,392.73	7.31	95.20
ಫರಂಗಿಪೇಟೆ	26,74,43,507.00	96,65,61,723.00	102,42,97,731.48	32,51,79,515.48	21.59	98.69
ಬಂಟ್ವಾಳ	9,21,40,113.00	22,25,93,518.24	22,36,92,780.00	9,32,39,374.76	1.19	98.00
ವಾಮದಪದವು	10,13,37,924.00	23,50,92,538.24	24,59,59,432.24	11,22,04,818.00	10.72	97.41
ಕುಪ್ಪೆಪದವು	8,21,97,238.50	25,89,64,785.50	26,48,22,214.00	8,80,54,667.00	7.13	99.02
ಗುರುಪುರ ಕೈಕಂಬ	16,59,13,717.80	81,42,95,510.80	86,84,68,570.40	22,00,86,777.40	32.65	98.09
ಸಿದ್ದಕಟ್ಟೆ	7,63,26,873.00	26,90,85,570.00	28,88,27,600.00	9,60,68,903.00	25.87	98.76
ಬೋಳಿಯಾರು	7,03,50,776.00	38,59,75,673.00	41,99,18,288.00	10,42,93,391.00	48.25	98.68
ಕಲ್ಲಡ್ಕ	6,70,93,978.00	46,88,56,912.00	50,15,19,488.00	9,97,56,554.00	48.68	99.71
ಗ್ರಾಮಚಾವಡಿ	84,93,726.00	6,97,80,412.00	9,92,91,220.00	3,80,04,534.00	347.44	100.00
ಒಟ್ಟು	**110,78,78,943.43**	**407,51,81,334.36**	**433,36,74,318.30**	**136,63,71,927.37**	**23.33**	**98.27**

ಆಡಳಿತ :

ವರದಿ ಸಾಲಿನಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿ ಒಟ್ಟು 14 ಜನ ಆಡಳಿತ ಮಂಡಳಿ ಸದಸ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಸದಸ್ಯರಿಗೆ ಅನುಕೂಲವಾಗುವಂತೆ ಸಂಘದಲ್ಲಿ ಉಪಸಮಿತಿಗಳನ್ನು ರಚಿಸಿಕೊಳ್ಳಲಾಗಿದೆ.

2025–26ನೇ ಸಾಲಿನಲ್ಲಿ ಒಟ್ಟು 14 ಆಡಳಿತ ಮಂಡಳಿ ಸಭೆಗಳು, 06 ಉಪಸಮಿತಿ ಸಭೆಗಳು, 1 ಮಹಾಸಭೆ ನಡೆದಿರುತ್ತದೆ.

ಸಿಬ್ಬಂದಿ ವರ್ಗ ಮತ್ತು ಸಿಬ್ಬಂದಿ ವೆಚ್ಚ :

ದಿನಾಂಕ 31–03–2026ಕ್ಕೆ ಸಂಘದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೇರಿ 27 ಜನ ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ವರದಿ ಸಾಲಿನಲ್ಲಿ ಒಟ್ಟು ರೂ.1,39,60,164.00 ಸಿಬ್ಬಂದಿ ವೆಚ್ಚ ಆಗಿರುತ್ತದೆ. ಸಿಬ್ಬಂದಿ ವೆಚ್ಚವನ್ನು ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ 0.84ರಷ್ಟು ಆಗುವುದು.

ಯಶಸ್ವಿನಿ ಯೋಜನೆ :

ವರದಿ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಸಹಕಾರ ಸಂಘದ ಸದಸ್ಯರಿಗಾಗಿ ಜಾರಿಗೆ ತಂದಿರುವ ಯಶಸ್ವಿನಿ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯಡಿ, ನಮ್ಮ ಸಹಕಾರ ಸಂಘದ ಒಟ್ಟು 246 ಸದಸ್ಯರ 832 ಕುಟುಂಬ ಸದಸ್ಯರು ಈ ಯೋಜನೆಯಡಿ ಸೌಲಭ್ಯ ಪಡೆಯಲು ನೋಂದಣಿ ಮಾಡಿಕೊಂಡಿರುತ್ತಾರೆ.

ಕ್ರಿಸ್‌ಮಸ್ ಆಚರಣೆ :


ಸಂಘದ ವತಿಯಿಂದ ಸದಸ್ಯರಿಗೆ ಕ್ರಿಸ್‌ಮಸ್ ಕೇಕ್ ವಿತರಿಸಿ ಶುಭ ಕೋರಲಾಯಿತು.


ಸಂಘದ ಇತರ ಸೇವೆಗಳು :

ಸಂಘದ ಬಿ.ಸಿ.ರೋಡು ಹಾಗೂ ಕಲ್ಲಡ್ಕ ಶಾಖೆಗಳಲ್ಲಿ ಇ–ಸ್ಟ್ಯಾಂಪ್ ಛಾಪಾ ಕಾಗದ ವಿತರಿಸುತ್ತಿದ್ದೇವೆ. ಸದಸ್ಯ ಗ್ರಾಹಕರ ಅನುಕೂಲಕ್ಕಾಗಿ RTGS/NEFT ಸೌಲಭ್ಯಗಳನ್ನು ನೀಡುತ್ತಿದ್ದೇವೆ. ಈ ಎಲ್ಲಾ ಸೌಲಭ್ಯಗಳನ್ನು ಸದಸ್ಯರು ಪಡೆಯಬೇಕೆಂದು ಕೋರುತ್ತೇವೆ.

ವಾರ್ಷಿಕ ವಹಿವಾಟು ಮತ್ತು ನಿವ್ವಳ ಲಾಭ :

2025–26ನೇ ಸಾಲಿನಲ್ಲಿ ರೂ.1434,72,88,688.44 ವಾರ್ಷಿಕ ವ್ಯವಹಾರ ನಡೆದಿರುತ್ತದೆ. 2025–26ನೇ ಸಾಲಿನಲ್ಲಿ ರೂ.3,40,49,023.15 ನಿವ್ವಳ ಲಾಭವನ್ನು ಸಿ.ಎ ರಾಜರತ್ನಂ ಹೆಚ್, ಸನ್ನದು ಲೆಕ್ಕ ಪರಿಶೋಧಕರು ಇವರು ದೃಢಪಡಿಸಿದ್ದು, ಆಡಿಟ್ ವರ್ಗೀಕರಣದಲ್ಲಿ 'ಎ' ಗ್ರೇಡ್ ಬಂದಿರುತ್ತದೆ. ಲಾಭವನ್ನು ಸಂಘದ ಉಪವಿಧಿ ಪ್ರಕಾರ ವಿಂಗಡಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸು ಮಾಡುತ್ತೇವೆ.





ಆಂತರಿಕ ಲೆಕ್ಕ ಪರಿಶೋಧನೆ :

2025–26ನೇ ಸಾಲಿನ ಆಂತರಿಕ ಲೆಕ್ಕ ಪರಿಶೋಧನೆಯನ್ನು ಸಿ.ಎ. ಮ್ಯಾಕ್ಸಿಂ ಎಂ. ಫೆರ್ನಾಂಡಿಸ್ R M C R & Co. ಚಾರ್ಟರ್ಡ್ ಅಕೌಂಟೆಂಟ್ಸ್ ಮಂಗಳೂರು ಇವರಿಂದ ನಡೆಸಲಾಯಿತು.

ಲೆಕ್ಕ ಪರಿಶೋಧಕರ ನೇಮಕಾತಿ :

2026–27ನೇ ಸಾಲಿನ ಲೆಕ್ಕ ಪರಿಶೋಧನೆ ನಡೆಸಲು ಸಿ.ಎ ವಿವಿಯಾನ್ ಪಿಂಟೊ ಸನ್ನದು ಲೆಕ್ಕಪರಿಶೋಧಕರು, ಮಂಗಳೂರು ಇವರನ್ನು ನೇಮಕ ಮಾಡಲು ಮಹಾಸಭೆಯ ಮಂಜೂರಾತಿಗಾಗಿ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

ಪಾಲು ಮುನಾಫೆ ಮತ್ತು ಬೋನಸ್ :

ಸಂಘದ 'ಎ' ಮತ್ತು 'ಡಿ' ವರ್ಗದ ಸದಸ್ಯರಿಗೆ 2024–25 ಸಾಲಿಗೆ ಶೇ 18ರಷ್ಟು ಪಾಲು ಮುನಾಫೆ ಪಾವತಿ ಮಾಡಲಾಗಿದೆ. ನೌಕರರಿಗೆ 45 ದಿನಗಳ ಬೋನಸ್ ಮತ್ತು ಎಕ್ಸ್‌ಗ್ರೇಷಿಯಾ ಪಾವತಿ ಮಾಡಲಾಗಿದೆ. ಸಂಘದಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ ಸದಸ್ಯರ ಪಾಲು ಮುನಾಫೆಯನ್ನು ಖಾತೆಗೆ ಜಮಾ ಮಾಡಲಾಗಿದೆ ಮತ್ತು ಉಳಿದವರಿಗೆ NEFT ಮೂಲಕ ಪಾವತಿಸಲಾಗಿದೆ. ದಿನಾಂಕ 31–03–2026ರ ಅಂತ್ಯಕ್ಕೆ 'ಎ' ವರ್ಗದ ಸದಸ್ಯರಿಗೆ ರೂ. 2.50 ಲಕ್ಷ ಪಾಲು ಮುನಾಫೆ ಹಾಗೂ 'ಡಿ' ವರ್ಗ ಸದಸ್ಯರಿಗೆ ರೂ. 0.88 ಲಕ್ಷ ಪಾಲು ಮುನಾಫೆ ಪಾವತಿಸಲು ಬಾಕಿ ಇರುತ್ತದೆ. ಸಹಕಾರಿ ಸಂಘಗಳ ಕಾಯಿದೆ ಪ್ರಕಾರ ಸತತವಾಗಿ ಮೂರು ವರ್ಷ ಪಾಲು ಮುನಾಫೆಯನ್ನು ಪಡಕೊಳ್ಳದೇ ಇದ್ದಲ್ಲಿ ಸದ್ರಿ ಮೊತ್ತವನ್ನು ಕಾದಿರಿಸಿದ ನಿಧಿಗೆ ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಪಾಲು ಮುನಾಫೆಯನ್ನು ಪಡೆಯದೇ ಇದ್ದ ಸದಸ್ಯರು ಪ್ರಧಾನ ಕಛೇರಿಗೆ ಬಂದು ಪಡೆಯಲು ಅಥವಾ ಸಮೀಪದ ಶಾಖೆಯಲ್ಲಿ ಉಳಿತಾಯ ಖಾತೆ ತೆರೆಯಲು ಅಥವಾ ಇತರ ಯಾವುದೇ ಬ್ಯಾಂಕಿನ ಖಾತೆ ನೀಡಿದ್ದಲ್ಲಿ NEFT ಸೌಲಭ್ಯದ ಮೂಲಕ ಪಾಲು ಮುನಾಫೆಯನ್ನು ಪಡಕೊಳ್ಳಲು ವಿನಂತಿಸುತ್ತೇವೆ. ವರದಿ ಸಾಲಿಗೆ ಶೇಕಡಾ 18ರಷ್ಟು ಪಾಲು ಮುನಾಫೆ ನೀಡಲು ಮತ್ತು ನೌಕರರಿಗೆ 60 ದಿನಗಳ ವೇತನದಷ್ಟು ಬೋನಸ್ ಮತ್ತು ಎಕ್ಸ್‌ಗ್ರೇಷಿಯಾ ನೀಡಲು ಆಡಳಿತ ಮಂಡಳಿ ಪ್ರಸ್ತಾಪಿಸಿದೆ.

2025–26ನೇ ಸಾಲಿಗೆ ಸಂಘದ ನಿರ್ದೇಶಕರು ಪಡೆದ ಭತ್ಯೆ ಹಾಗೂ ಇತರ ವೆಚ್ಚ :

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ನಿರ್ದೇಶಕರು ಯಾವುದೇ ಸಭಾ ಭತ್ಯೆ ಅಥವಾ ಇತರೆ ಭತ್ಯೆಯನ್ನು ಪಡೆದಿರುವುದಿಲ್ಲ.

2025–26ನೇ ಸಾಲಿನಲ್ಲಿ ಸಂಘದ ವಿವಿಧ ಶಾಖೆಗಳಲ್ಲಿ ಅಡಮಾನಕ್ಕೆ ಬಂದಿರುವ ಚಿನ್ನಾಭರಣಗಳ ಭೌತಿಕ ಪರಿಶೀಲನೆ ಹಾಗೂ ಶಾಖಾವಾರು ಸಾಲದ ಸ್ಥಳ ಪರಿಶೀಲನೆಗಾಗಿ ಆಡಳಿತ ಮಂಡಳಿಯ ನಿರ್ದೇಶಕರು ಭೇಟಿ ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ನಿರ್ದೇಶಕರಿಗೆ ಪ್ರಯಾಣ ವೆಚ್ಚವಾಗಿ ಒಟ್ಟು ರೂ.45,000/– ಮೊತ್ತವನ್ನು ನೀಡಲಾಗಿದೆ.

ಬಿ.ಸಿ.ರೋಡು ಶಾಖೆ/ಪ್ರಧಾನ ಕಛೇರಿಯ ಕಟ್ಟಡ ನಿರ್ಮಾಣ :

ಸಂಘದ ಪ್ರಧಾನ ಕಚೇರಿ ಹಾಗೂ ಬಿ.ಸಿ.ರೋಡು ಶಾಖೆಗಾಗಿ ರೂ.1.50 ಕೋಟಿ ಅಂದಾಜು ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಅಗತ್ಯ ಪರವಾನಗಿಗಳು ಹಾಗೂ ಅನುಮತಿಗಳನ್ನು ಪಡೆದುಕೊಳ್ಳಲಾಗಿದೆ. ಕಟ್ಟಡ ನಿರ್ಮಾಣದ ವೆಚ್ಚವನ್ನು ಸಂಘದ ಕಟ್ಟಡ ನಿಧಿಯಿಂದ ಭರಿಸಲು ಅನುಮೋದನೆ ಪಡೆಯಲಾಗಿದೆ. ಪ್ರಸ್ತುತ ಕಟ್ಟಡದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಬಾಕಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ, ನೂತನ ಕಟ್ಟಡವನ್ನು ಉದ್ಘಾಟಿಸಿ ಸದಸ್ಯರ ಸೇವೆಗಳಿಗೆ ಮುಕ್ತವಾಗಿಡಲು ಆಡಳಿತ ಮಂಡಳಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಕಾರ್ಯಗತವಾದ ಯೋಜನೆಗಳು :

ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಪುತ್ತೂರು ತಾಲೂಕಿನ ಪಡೀಲ್ ಹಾಗೂ ಮಂಗಳೂರು ತಾಲೂಕಿನ ಬಜ್ಪೆ ಪ್ರದೇಶಗಳಲ್ಲಿ ನೂತನ ಶಾಖೆಗಳನ್ನು ಪ್ರಾರಂಭಿಸಲು ಅಗತ್ಯ ಅನುಮತಿಯನ್ನು ಈಗಾಗಲೇ ಪಡೆದುಕೊಳ್ಳಲಾಗಿದೆ. ಎರಡೂ ಶಾಖೆಗಳ ಪ್ರಾರಂಭಕ್ಕೆ ಸಂಬಂಧಿಸಿದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅಗತ್ಯ ವ್ಯವಸ್ಥೆಗಳನ್ನು ಪೂರ್ಣಗೊಳಿಸಿ ಶೀಘ್ರದಲ್ಲೇ ಎರಡೂ ನೂತನ ಶಾಖೆಗಳನ್ನು ಕಾರ್ಯಾರಂಭಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದಿನ ಯೋಜನೆಗಳು :

* ಕಾರ್ಯಕ್ಷೇತ್ರಗಳಲ್ಲಿ ಶಾಖೆಗಳನ್ನು ತೆರೆಯುವುದು.
